**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್:335/2022**

ಸಿಡಬ್ಲ್ಯೂ: 1
ಪಿಡಬ್ಲ್ಯೂ: 1

| | | |
|---|---|---|
| ಸಾಕ್ಷಿಯ ಹೆಸರು | : | ಮಹೇಶ್ವರಪ್ಪ |
| ತಂದೆಯ ಹೆಸರು | : | ಸೋಮಯ್ಯ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ತಹಶೀಲ್ದಾರ್ |
| ವಾಸಸ್ಥಳ | : | ಚಿಕ್ಕಮಗಳೂರು |

ಇಂದು ದಿನಾಂಕ:11.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ಮಾನ್ಯ ಎಪಿಪಿಯವರಿಂದ:

ನಾನು ದಿನಾಂಕ:31.03.2017 ರಿಂದ 13.04.2017 ರವರೆಗೆ ಮೂಡಿಗೆರೆಯಲ್ಲಿ ತಹಶೀಲ್ದಾರ್ ಎಂದು ಕರ್ತವ್ಯ ನಿರ್ವಹಿಸಿದ್ದೆ.

ದಿನಾಂಕ:25.03.2017 ರಂದು ಈ ಹಿಂದೆ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ನಾಗೇಶ್ ಎಂಬುವವರಿಗೆ ಒಂದು ದೂರವಾಣಿ ಕರೆ ಬಂದು, ಕೊಲ್ಲಿಬೈಲು ಕ್ರಾಸಿನಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ. ನಂತರ ಅವರು ಸಂಜೆ 6.30 ಗಂಟೆಯಿಂದ 7 ಗಂಟೆಯ ಅವದಿಯಲ್ಲಿ ಸದರಿ ಸ್ಥಳಕ್ಕೆ ಹೋಗಿರುತ್ತಾರೆ. ಅಲ್ಲಿ ಮೂರು ಲಾರಿಗಳು ಕಂಡುಬಂದಿದ್ದು, ಅವುಗಳ ನೋಂದಣಿ ಸಂ.ಕೆಎ-19-7125, ಕೆಎ-35-3786, ಕೆಎ-14-9994 ಎಂದು ಇದ್ದವು. ಸದರಿ ಲಾರಿಗಳನ್ನು ತಪಾಸಣೆ ಮಾಡಿದಾಗ ಮರಳು ಇರುವುದು ಕಂಡುಬಂದಿದ್ದು, ಸದರಿ ವಾಹನದ ಚಾಲಕರ ಬಳಿ ಆ ಮರಳನ್ನು ಸಾಗಾಟ ಮಾಡಲು ಪರವಾನಿಗೆ ಇದ್ದೇಯಾ ಎಂದು ಕೇಳಲಾಗಿ ಪರ್ಮಿಟ್ ಅನ್ನು ತೋರಿಸಿದ್ದು, ಪರ್ಮಿಟ್ ಅವದಿ ಮುಗಿದಿರುತ್ತದೆ. ಲಾರಿ ನೋಂದಣಿ ಸಂ.ಕೆಎ-19-7125 ರ ವಾಹನ ಚಾಲಕ ಆರೋಪಿ 1 ರವರಾಗಿದ್ದು, ಮತ್ತೊಂದು ವಾಹನ ನೋಂದಣಿ ಸಂ.ಕೆಎ-35-3786 ರ ವಾಹನ ಚಾಲಕ ಆರೋಪಿ 2 ರವರಾಗಿದ್ದು, ಮತ್ತೊಂದು ಲಾರಿಯ ವಾಹನ ಚಾಲಕ ಆರೋಪಿ 4 ರವರಾಗಿದ್ದು ಕಂಡುಬಂದಿರುತ್ತದೆ. ಆ ಕಾಲಕ್ಕೆ 2 ನೇ ಆರೋಪಿಯ ಸಹಾಯಕ ಆರೋಪಿ 3 ಸಹ ಆ ವಾಹನದಲ್ಲಿ ಕಂಡುಬಂದಿರುತ್ತಾರೆ. 4 ನೇ ಆರೋಪಿಯ ಸಹಾಯಕಯಾದ 5 ನೇ ಆರೋಪಿಯೂ ಸಹ ಅಲ್ಲಿ ಇರುವುದು ಕಂಡುಬಂದಿರುತ್ತದೆ. ತದನಂತರ ವಿಚಾರಿಸಲಾಗಿ ಆರೋಪಿತರು ಕಳ್ಳತನ ಮಾಡಿ ಅಕ್ರಮವಾಗಿ ಮರಳನ್ನು ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಅವರ ವಿರುದ್ದ ಕಾನೂನು ಕ್ರಮ ತೆಗೆದುಕೊಳ್ಳಲು ಚಾಸಾ-2 ರವರು ಅವರುಗಳನ್ನು ಹಾಗೂ ಲಾರಿಗಳನ್ನು ಪೊಲೀಸರ ವಶಕ್ಕೆ ನೀಡಿರುತ್ತಾರೆ. ತದನಂತರ ಚಾಸಾ-2 ರವರು ವರ್ಗಾವಣೆಯಾಗಿದ್ದು, ನಾನು ಅವರ ಸ್ಥಾನಕ್ಕೆ ನಿಯುಕ್ತಿಗೊಂಡ ಕಾರಣ ಆರೋಪಿತರ ವಿರುದ್ದ

ದಿನಾಂಕಃ04.04.2017 ರಂದು ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರು ದಾಖಲಿಸಿರುತ್ತೇನೆ. ಚಾಸಾ-7 ಮತ್ತು 8 ರವರ ಸಮಕ್ಷಮ ಮಹಜರು ಮಾಡಿ, ಮರಳು, ವಾಹನಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ. ಸದರಿ ಮಹಜರನ್ನು ಸಂಜೆ 6.15 ರಿಂದ 6.45 ರ ಅವದಿಯಲ್ಲಿ ಮಾಡಿರುತ್ತಾರೆ. ಮಹಜರು ಕಾಲಕ್ಕೆ ನಾನು ಸಹ ಹಾಜರಿದ್ದೆ. ಸಾಕ್ಷಿಯು ತಾವು ನೀಡಿದ ದೂರಿನ ದೃಡೀಕೃತ ಪ್ರತಿ ಹಾಗೂ ಅದರ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಗಳನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 6 ಫೋಟೋಗಳ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು 2 ರಿಂದ 3 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಮಹಜರು ಕಾಲಕ್ಕೆ ತೆಗೆಯಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿದ್ದ 7 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ಆರೋಪಿತರು ಒಬ್ಬರಿಗೆ ನೀಡಿರುವ ಪರವಾನಿಗೆಯನ್ನು ಉಪಯೋಗಿಸಿಕೊಂಡು ಪದೇ ಪದೇ ಮರಳನ್ನು ಅಕ್ರಮವಾಗಿ ಸಾಗಾಟ ಮಾಡಿರುತ್ತಾರೆ ಎಂದು ನಾನು ದೂರು ನೀಡಿದ್ದೇನೆ ಎಂದರೆ ಸರಿ. ಆ ಪರವಾನಿಗೆಯನ್ನು ಆರೋಪಿತರು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ನಷ್ಟಪಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ7 ರವರ ಪರ ಶ್ರೀ ಎಸ್.ಬಿ. ವಕೀಲರಿಂದಃ

1. ಚಾಸಾ-2 ದಿನಾಂಕಃ31.03.2017 ರಂದು ವರ್ಗಾವಣೆಯಾಗಿರುತ್ತಾರೆ. ನಾನು ಹೇಳಿದ ಘಟನೆಯ ಬಗ್ಗೆ ಚಾಸಾ-2 ಪೊಲೀಸ್ ಠಾಣೆಗೆ ಲಿಖಿತವಾಗಿ ದೂರು ನೀಡಿದ್ದರು. ಆ ದೂರನ್ನು ದಿನಾಂಕಃ25.03.2017 ರಂದು ನೀಡಿದ್ದರು. ಆ ದೂರನ್ನು ನಾನು ನೋಡಿಲ್ಲ. ಚಾಸಾ-2 ದೂರು ಕೊಟ್ಟ ನಂತರ ಅದೇ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು ದೂರು ನೀಡುವ ಸಾದ್ಯತೆ ಇಲ್ಲ ಎಂದರೆ ಸಾಕ್ಷಿ ನಾನು ಮಾಹಿತಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ-2 ರವರು ದೂರು ನೀಡುವ ಕಾಲಕ್ಕೆ ಅವರಿಗೆ ಸಂಪೂರ್ಣ ಮಾಹಿತಿ ಇರದ ಕಾರಣ ಅವರು ವರ್ಗಾವಣೆಯಾದ ಕಾರಣ ದೂರು ನೀಡಿರುತ್ತೇನೆ. ನಿಪಿ-1 ದೂರನ್ನು ಗಣಕೀಕರಣ ಮಾಡಲಾಗಿದೆ. ನಿಪಿ-1 ದೂರಿನಲ್ಲಿ ದೂರು ನೀಡಲು ಆಗಿರುವ ವಿಳಂಬಕ್ಕೆ ಸರಿಯಾದ ಕಾರಣಗಳನ್ನು ನಮೂದಿಸಿಲ್ಲ ಎಂದರೆ ಸರಿ. ನಾನು ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ನಿಪಿ-1 ರಂತೆ ನಾನೇ ನೇರವಾಗಿ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ ಎಂಬುದು ಸುಳ್ಳು ಎಂದರೆ ಸರಿಯಲ್ಲ.

2. ಆರೋಪಿತರ ಹೆಸರುಗಳು ನನಗೆ ನೆನಪಾಗುತ್ತಿಲ್ಲ. 6 ನೇ ಆರೋಪಿಯನ್ನು ನಾನು ಎಲ್ಲಿ ನೋಡಿದ್ದೆನೆ ಎಂದು ನೆನಪಿಲ್ಲ. ಪೊಲೀಸರು ಮಹಜರು ಬರೆದು ನನ್ನ ಸಮಕ್ಷಮ ಫೋಟೋ ತೆಗೆದಿದ್ದರೆ ಫೋಟೋಗಳಲ್ಲಿ ನಾನು ಇರುತ್ತಿದ್ದೆ ಮತ್ತು ಮಹಜರಿಗೆ ಸಹಿ ಹಾಕುತ್ತಿದ್ದೆ ಎಂದರೆ ಸಾಕ್ಷಿಯು ಫೋಟೋ ತೆಗೆಯುವಾಗ ನಾನು ಪಕ್ಕದಲ್ಲಿದ್ದೆ ಎಂದು ನುಡಿಯುತ್ತಾರೆ. ಆ ಕಾರಣದಿಂದ ಪೊಲೀಸರು ಏನು ನಡವಳಿಕೆ ಮಾಡಿರುತ್ತಾರೆ ಎಂದು ನಾನು ಸ್ಪಷ್ಟವಾಗಿ ಗಮನಿಸಿಲ್ಲ ಎಂದರೆ ಸರಿಯಲ್ಲ. ಮರಳನ್ನು ಸಾಗಾಟ ಮಾಡಲು ನೀಡುವ ಪರವಾನಿಗೆ ಸಲುವಾಗಿ ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿ ಪರವಾನಿಗೆಯನ್ನು ನೀಡುತ್ತದೆ. ಸದರಿ ಸಮಿತಿಯ ಪರವಾನಿಗೆ ನೀಡಿದ ಕುರಿತು ಲೆಡ್ಜರ್ ಅನ್ನು ನಿರ್ವಹಿಸುತ್ತಾರೆಎಂದರೆಸರಿ. ಸದರಿ ಲೆಡ್ಜರಿನಲ್ಲಿ ಯಾರಿಗೆ ಯಾರ ಪರವಾಗಿ ಪರವಾನಿಗೆ ನೀಡಲಾಗಿದೆ ಮತ್ತು ಎಲ್ಲಿಂದ ಎಲ್ಲಿಗೆ ಮರಳನ್ನು ಸಾಗಾಟ ಮಾಡುವ ಬಗ್ಗೆ ನಮೂದಿಸಲಾಗುತ್ತದೆ ಎಂದರೆ ಸರಿ. ಅದೇ ರೀತಿ ಪರವಾನಿಗೆ ವ್ಯಾಲಿಡಿಟಿಯನ್ನು ನಮೂದಿಸಲಾಗಿರುತ್ತದೆ ಎಂದರೆ ಸರಿ. ಯಾವುದೇ ಪರವಾನಿಗೆಹೊಂದಿರುವ ವ್ಯಕ್ತಿ ಮರಳನ್ನು ಸಾಗಾಟ ಮಾಡುವಾಗ ಪರವಾನಿಗೆಯನ್ನು ಸಮಿತಿಗೆ ಶರಂಡರ್ ಮಾಡಬೇಕು ಎಂದರೆ ಸರಿ. ಅದನ್ನು ನೀಡಿದ ನಂತರ ಅಧಿಕಾರಿಗಳು ವಾಹನ ಸಂಖ್ಯೆ ಹಾಗೂ ಅದರ ಇತರೆ ಅಂಶಗಳನ್ನು ಗಮನಿಸಿ ಮರಳು ಸಾಗಾಟ ಮಾಡಲು ಬಿಡುತ್ತಾರೆ ಎಂದರೆ ಸರಿ. ತಹಶೀಲ್ದಾರ್ ಆಗಿ ಕಾರ್ಯನಿರ್ವಸುತ್ತಿದ್ದ ಕಾಲಕ್ಕ ಮರಳು ಸಾಗಾಟ ಮಾಡಲು ನೀಡುವ ಸಮಿತಿಗೆ ನಾನು ಸಹ ಒಬ್ಬ ಸದಸ್ಯ ಎಂದರೆ ಸರಿ.

3. ನಾನು ದೂರು ನೀಡುವ ಕಾಲಕ್ಕೆ ಆರೋಪಿತರಿಗೆ ನೀಡಿದ್ದ ಮರಳು ಪರವಾನಿಗೆಯ ಪ್ರತಿಯನ್ನು ಲಗತ್ತಿಸಿ ನೀಡಿಲ್ಲ. 2017 ನೇ ಸಾಲಿನಲ್ಲಿ ಕನ್ನಡ ದಿನಪತ್ರಿಕೆಗಳಲ್ಲಿ ಮೂಡಿಗೆರೆಯ ಕಂದಾಯ ಅಧಿಕಾರಿಗಳು ಮರಳು ಸಾಗಾಣೆ ಮಾಡಿಸುತ್ತಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ಬಂದಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ನಿರಪರಾದಿಗಳ ಮೇಲೆ ಎಲ್ಲ ಅಧಿಕಾರಿಗಳು ಸೇರಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಒಬ್ಬ ವ್ಯಕ್ತಿಗೆ ಮರಳು ಸಾಗಾಟ ಮಾಡಲು ನೀಡಿದ ಪರವಾನಿಗೆಯನ್ನು ಉಪಯೋಗಿಸಿಕೊಂಡು ಬೇರೆಯವರು ಮರಳು ಸಾಗಾಟ ಮಾಡಲು ಸಾದ್ಯವಿಲ್ಲ ಎಂದರೆ ಸರಿಯಲ್ಲ. ನಾನು ದೂರು ದಾಖಲಿಸಿದ ನಂತರ ಪೊಲೀಸರು ಯಾವುದೇ ದಾಖಲಾತಿ ನೀಡಿಲ್ಲ. ನಾನು ಠಾಣೆಗೆ ಹೋಗಿದ್ದ ಸಂಬಂಧ ಪೊಲೀಸರು ನನ್ನ ಯಾವುದೇ ಸಹಿಯನ್ನು ದಾಖಲಾತಿಗೆ ಪಡೆದುಕೊಂಡಿಲ್ಲ.ದಿನಾಂಕ.04.04.2017 ರಂದು ಮಹಜರನ್ನು 6.15 ರಿಂದ 6.45 ಅವದಿಯಲ್ಲಿ ಬರೆದಿರುತ್ತಾರೆ. ಆ ಸಮಯದಲ್ಲಿ ಮಹಜರನ್ನು ಓದಿ ನೋಡಿ ಎಂದು ಹೇಳಿಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿನಪತ್ರಿಕೆಗಳಲ್ಲಿ ಬಂದ ವಿಚಾರವನ್ನು ಸುಳ್ಳು ಮಾಡುವ ಉದ್ದೇಶದಿಂದ ನಿರಪರಾದಿಗಳ ಮೇಲೆ ಈ ಸುಳ್ಳು ಪ್ರಕರಣ

ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೆಳಿರುವ ವಾಹನ ನೋಂದಣಿ ಸಂಖ್ಯೆಗಳನ್ನು ಆರ್.ಟಿ.ಒ ಕಚೇರಿಯಿಂದ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ